

# ಆರ್ಮುಗಂ ಅರ್ಧಶತಕ!

ಉತ್ಸಾಹದ ಕಾವು ಮತ್ತು ಶೀತಲತೆ– ಎರಡನ್ನೂ ಶೀರ್ಷಿಕೆಯಲ್ಲಿ ಹೊಂದಿರುವ 'ಜಿಗರ್‌ಥಂಡ' ಚಿತ್ರಮಂದಿರಗಳ ಹೊಸ್ತಿಲಲ್ಲಿದೆ. 'ಇದು ರವಿಶಂಕರ್ ಅವರ 50ನೇ ಸಿನಿಮಾ' ಎನ್ನುವ ವಿಶೇಷಣ ಚಿತ್ರದ ಪ್ರಚಾರದಲ್ಲಿ ಪ್ರಮುಖವಾಗಿ ಬಳಕೆಯಾಗುತ್ತಿದೆ.

ರಾಹುಲ್ 'ಜಿಗರ್‌ಥಂಡ'ದ ನಾಯಕ. ಆದರೆ, ರಾಹುಲ್ ಅವರ ಜೊತೆಗೆ ರವಿಶಂಕರ್ ಅವರನ್ನು ಕೂಡ ಚಿತ್ರತಂಡ ನಾಯಕನಂತೆ ಬಿಂಬಿಸುತ್ತಿದೆ. 'ಐವತ್ತನೇ ಚಿತ್ರದಲ್ಲಿ ರವಿಶಂಕರ್ ಅಬ್ಬರಿಸಿ ಬೊಬ್ಬಿರಿದಿದ್ದಾರೆ. ಚಿತ್ರರಸಿಕರಿಗೆ ರಸಕವಳ ಖಚಿತ' ಎನ್ನುತ್ತಾರೆ ಚಿತ್ರದ ನಿರ್ದೇಶಕ ಶಿವಗಣೇಶ್. 'ಕೆಂಪೇಗೌಡ' ಚಿತ್ರದ ಆರ್ಮುಗಂ ಪಾತ್ರದಂತೆ 'ಜಿಗರ್‌ಥಂಡ' ಪಾತ್ರವೂ ರವಿಶಂಕರ್ ವೃತ್ತಿಜೀವನದಲ್ಲಿ ಮುಖ್ಯವಾಗಲಿದೆ ಎನ್ನುವ ಅನಿಸಿಕೆ ಅವರದು.

ಸುದೀಪ್ ಬೆಂಬಲವಾಗಿ ನಿಂತಿರುವುದು ಕೂಡ ಶಿವಗಣೇಶ್‌ರ ಆತ್ಮವಿಶ್ವಾಸ ಹೆಚ್ಚಿಸಿದೆ. "ಅವರು ನಮ್ಮ ಚಿತ್ರದ ಮೆಂಟರ್ ಮತ್ತು ಗೈಡ್. ಅವರ ಸಪೋರ್ಟ್‌ನಿಂದಾಗಿ ಮೂಲಚಿತ್ರಕ್ಕಿಂತ ನಮ್ಮ ಸಿನಿಮಾ ಚೆನ್ನಾಗಿ ಬಂದಿದೆ' ಎನ್ನುತ್ತಾರೆ.

ಸಂಯುಕ್ತಾ ಹೊರನಾಡು, ದತ್ತಣ್ಣ, ಸಾಧು ಕೋಕಿಲ, ಮಠ ಗುರುಪ್ರಸಾದ್ ತಾರಾಗಣದಲ್ಲಿರುವ ಈ ಚಿತ್ರದ ವಿಶೇಷ ಪಾತ್ರಗಳಲ್ಲಿ ರಕ್ಷಿತ್ ಶೆಟ್ಟಿ ಹಾಗೂ ನಿರ್ಮಾಪಕ ಕೆ. ಮಂಜು ನಟಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನದ ಗೀತೆಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದು ಕೂಡ ಚಿತ್ರತಂಡದ ಉತ್ಸಾಹಕ್ಕೆ ಕಾರಣವಾಗಿದೆ. ಅಂದ ಹಾಗೆ, 'ಜಿಗರ್‌ಥಂಡ' ತಮಿಳಿನ ಅದೇ ಹೆಸರಿನ ಸಿನಿಮಾದ ಕನ್ನಡರೂಪ.

# ಭಯ–ಭಾವುಕತೆಯ 'ನಾನಿ'

'ನಮ್ಮ ಸಿನಿಮಾ ಗೆದ್ದೇ ಗೆಲ್ಲುತ್ತೆ. ಇದು ಬರಿಯ ಹುಂಬ ವಿಶ್ವಾಸವಿಲ್ಲ. ನಮ್ಮ ಸಿನಿಮಾದ ಗಟ್ಟಿತನದ ಬಗ್ಗೆ ಇರುವ ನಂಬಿಕೆ'. ಸುಮಂತ್ ಅವರ ಮಾತುಗಳಲ್ಲಿ ಆತ್ಮವಿಶ್ವಾಸ ಇಣುಕುತ್ತಿತ್ತು. 'ನಾನಿ' ಚಿತ್ರದ ಮೂಲಕ ಯುವ ನಿರ್ದೇಶಕ ಸುಮಂತ್ ಗಾಂಧಿನಗರದಲ್ಲಿ ಅದೃಷ್ಟಪರೀಕ್ಷೆಗೆ ತೊಡಗಿದ್ದಾರೆ.

ಕನ್ನಡ ಚಿತ್ರರಂಗದಲ್ಲೀಗ ದೆವ್ವಗಳ ಜಮಾನ. 'ಹಾರರ್' ಹಣೆಪಟ್ಟಿ ಹಚ್ಚಿಕೊಂಡ ಸಿನಿಮಾಗಳನ್ನು ಪ್ರೇಕ್ಷಕ ಮೆಚ್ಚಿಕೊಳ್ಳುತ್ತಿರುವ ಸಂದರ್ಭ ಕೂಡ 'ನಾನಿ'ಗೆ ಪೂರಕವಾಗಿದೆ. ಪ್ರೇಕ್ಷಕರನ್ನು ದಿಗಿಲುಗೊಳಿಸುವ ಘಟನೆಗಳ ಜೊತೆಗೆ ಭಾವನಾತ್ಮಕ ದೃಶ್ಯಗಳೂ ಚಿತ್ರದಲ್ಲಿವೆಯಂತೆ. ಕನ್ನಡದ ಜೊತೆಗೆ ತೆಲುಗಿನಲ್ಲೂ 'ನಾನಿ' ತೆರೆ ಕಾಣುತ್ತಿದೆ. ಮುಂದಿನ ದಿನಗಳಲ್ಲಿ ತಮಿಳು ಹಾಗೂ ಹಿಂದಿಗೂ 'ನಾನಿ' ರೂಪಾಂತರಗೊಳ್ಳಲಿದೆ ಎನ್ನುತ್ತಾರೆ ಸುಮಂತ್.

'ಗುಜರಾತ್‌ನಲ್ಲಿ ನಡೆದ ಸತ್ಯಕಥೆಯೊಂದನ್ನು ಆಧರಿಸಿ ಚಿತ್ರಕಥೆ ರಚಿಸಿದ್ದೇವೆ. ಶ್ರೀಮಂತ ದಂಪತಿಯು ಪಡೆಯುವ ಪ್ರನಾಳಶಿಶು ಬೆಳೆದು, ಹನ್ನೆರಡು ವರ್ಷದವಳಿದ್ದಾಗ ಬೆಂಕಿ ಆಕಸ್ಮಿಕದಲ್ಲಿ ಸಾಯುತ್ತಾಳೆ. ಆ ಬಾಲಕಿಯ ಅತೃಪ್ತ ಆತ್ಮ ಈಗಲೂ ಅಲೆದಾಡುತ್ತಿದೆ ಎಂದು ಅಲ್ಲಿನ ಜನ ನಂಬಿದ್ದಾರಂತೆ. ಈ ಘಟನೆಯ ಎಳೆ ಹಿಡಿದು 'ನಾನಿ'ಯ ಕಥೆ ರೂಪುಗೊಂಡಿದೆ. 'ನಾನಿ'ಯ ಪಾತ್ರದಲ್ಲಿ ಬೇಬಿ ಸುಹಾಸಿನಿ ಹಾಗೂ ಚಿತ್ರದ ಯುವಜೋಡಿಯಾಗಿ ಪ್ರಿಯಾಂಕಾ ಮತ್ತು ಮನಿಷ್ ನಟಿಸಿದ್ದಾರೆ. ಸುಹಾಸಿನಿ ಹಾಗೂ ಜೈಜಗದೀಶ್ ಜೋಡಿಯಾಗಿ ಕಾಣಿಸಿಕೊಂಡಿರುವುದು ಚಿತ್ರದ ಮತ್ತೊಂದು ವಿಶೇಷ.

